

ಚಿತ್ರ: ಆನಂದ ಭಕ್ಷಿ

# ನಟರಾಜ್ ಹುಳಿಯಾರ್

ಕನ್ನಡದ ಮುಂಚೂಣಿಯ ಲೇಖಕ ನಟರಾಜ್ ಹುಳಿಯಾರ್ ಕವಿ, ಕತೆಗಾರ, ವಿಮರ್ಶಕ, ಅಂಕಣಕಾರ, ಸಂಪಾದಕ, ನಾಟಕಕಾರ. ಒಂದು ಪ್ರಕಾರದಿಂದ ಇನ್ನೊಂದು ಪ್ರಕಾರದ ಕಡೆಗಿನ ಜಿಗಿತವನ್ನು ಅವರ ಬರವಣಿಗೆಯಲ್ಲಿ ಕಾಣಬಹುದು. ಆ ಜಿಗಿತವೇ ಅವರ ಬರಹಗಳಿಗೆ ಚಲನಶೀಲತೆಯನ್ನು ತಂದಿದೆ.

'ಮತ್ತೊಬ್ಬ ಸರ್ವಾಧಿಕಾರಿ', 'ಮಾಯಾ ಕಿನ್ನರಿ'(ಕಥಾಸಂಗ್ರಹಗಳು), 'ಗಾಳಿ ಬೆಳಕು'(ಅಂಕಣ), 'ಶೇಕ್‌ಸ್ಪಿಯರ್ ಮನೆಗೆ ಬಂದ'(ನಾಟಕ),'ರೂಪಕಗಳ ಸಾವು'(ಕವಿತೆ) 'ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ'(ಸಂಶೋಧನೆ) ಅವರ ಕೆಲವು ಪುಸ್ತಕಗಳು. ರಾಮಮನೋಹರ ಲೋಹಿಯಾ, ಪಿ. ಲಂಕೇಶ್, ಕಿ.ರಂ. ನಾಗರಾಜ ಅವರ ಬರಹಗಳನ್ನು ಅವರು ಸಂಪಾದಿಸಿದ್ದಾರೆ. ಪ್ರಸ್ತುತ ಬೆಂಗಳೂರು ವಿಶ್ವವಿದ್ಯಾಲಯದ ಇಂಗ್ಲಿಷ್ ಪ್ರಾಧ್ಯಾಪಕರು ಮತ್ತು ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕರು. ಮೂಲತಃ ಅವರು ತುಮಕೂರು ಜಿಲ್ಲೆಯ ಹುಳಿಯಾರಿನವರು.

ಮಾಡಿ ಪ್ರಕಟಣೆಗೆ ಸಿದ್ಧಪಡಿಸುವ ಗಳಿಗೆಯವರೆಗೂ ಆ ಕತೆ ಸಾಧ್ಯವಾದ ಮಟ್ಟಿಗೂ ಪರಿಪೂರ್ಣವಾಗಬೇಕೆಂಬುದರ ಕಡೆಗೇ ನನ್ನ ಗಮನವಿರುತ್ತದೆಂದು ಕಾಣುತ್ತದೆ. ಕತೆ ಪ್ರಕಟವಾದ ಮೇಲೆ ಓದುಗರು, ಗೆಳೆಯರು ತಾವಾಗಿಯೇ ಹೇಳಿದಾಗ ಅವರ ಅಭಿಪ್ರಾಯವನ್ನು ಕೇಳಿಸಿಕೊಳ್ಳುತ್ತೇನೆಯೇ ಹೊರತು, ಅವರ ಅಭಿಪ್ರಾಯ ಕೇಳುವುದು ಕಡಿಮೆ. ಆದರೂ ಒಂದು ಕತೆಯನ್ನು ವಸ್ತುನಿಷ್ಠವಾಗಿ ಓದಬಲ್ಲ ಗೆಳೆಯ, ಗೆಳತಿಯರನ್ನು 'ಕತೆ ಹೇಗನ್ನಿಸುತ್ತೆ?' ಎಂದು ಕೇಳಿದ್ದಿದೆ. ಅಜ್ಞಾತ ಓದುಗರ, ವಿಮರ್ಶೆ, ಮೆಚ್ಚುಗೆ, ಗ್ರಹಿಕೆ, ಪ್ರಶ್ನೆಗಳು ನನ್ನ ಬರವಣಿಗೆಗೆ ನೆರವಾದದ್ದಿದೆ. ಹಾಗೆಯೇ, ರಹಮತ್ ತರೀಕೆರೆ, ಪಿ. ಲಂಕೇಶ್, ಡಿ.ಆರ್. ನಾಗರಾಜ್, ಕೃಷ್ಣಮೂರ್ತಿ ಹನೂರು, ಟಿ.ಪಿ. ಅಶೋಕ, ಎಚ್. ನಾಗವೇಣಿ ಮೊದಲಾದವರು ವಿವಿಧ ಘಟ್ಟಗಳಲ್ಲಿ ನನ್ನ ಕತೆಗಳ ಬಗ್ಗೆ ಅಲ್ಲಲ್ಲಿ ಬರೆದ ವಿಮರ್ಶೆಗಳು ನನಗೆ ನೆರವಾಗಿವೆ.

ಆದರೂ ನಾನಾಗಲೀ ಇತರ ಕತೆಗಾರ, ಕತೆಗಾರ್ತಿಯರಾಗಲೀ ವಿಮರ್ಶೆಯಿಂದ ಪಡೆಯುವ ಪ್ರೇರಣೆಗಳು ನಮ್ಮ ಕತೆಗಳ ಬಗ್ಗೆ ಬಂದ ವಿಮರ್ಶೆಯಿಂದ ಮಾತ್ರ ಪಡೆಯುವ ಪ್ರೇರಣೆಗಳಷ್ಟೇ ಆಗಿರುವುದಿಲ್ಲ; ಲಂಕೇಶರು ಇತರರ ಕತೆಗಳ ಬಗ್ಗೆ ಬರೆದ ವಿಮರ್ಶೆಯಲ್ಲಿ ನನಗೂ ಪಾಠಗಳಿರುತ್ತವೆ. ಯಾರದೋ ಕತೆಗಳನ್ನು ವಿಮರ್ಶಿಸುವಾಗ ಲಂಕೇಶರು, 'ಇದ್ಯಾಕೆ ಈತನ ಎಲ್ಲ ಪಾತ್ರಗಳಿಗೂ ಯಾವಾಗಲೂ "ಗಕ್ಕನೆ" ಎಚ್ಚರವಾಗುತ್ತದೆ!?' ಎಂದು ತಮಾಷೆ ಮಾಡಿದ್ದರು. ಆ ತಮಾಷೆಯಲ್ಲಿರುವ ವಿಮರ್ಶೆಯನ್ನು ಗ್ರಹಿಸಿ, ಕತೆ ಬರೆಯುವಾಗ ಹೀಗೆ ಯಾಂತ್ರಿಕವಾಗಿ ಸವಕಲು ವರ್ಣನೆಗಳನ್ನು ಬಳಸಬಾರದೆಂಬ ಪಾಠವನ್ನು ಕಲಿಯಲೆತ್ನಿಸಿದ್ದೇನೆ. ನಾನು ವಿಮರ್ಶೆಯ ವಿದ್ಯಾರ್ಥಿಯೂ, ವಿಮರ್ಶೆಯ ಪಾಠ ಹೇಳುವ ಅಧ್ಯಾಪಕನೂ ಆಗಿರುವುದರಿಂದಲೂ, ಬಗೆಬಗೆಯ ವಿಮರ್ಶೆಗಳಿಂದ ಹಲವು ಪಾಠಗಳನ್ನು ಕಲಿಯುತ್ತಿರುತ್ತೇನೆ. ಆದರೆ ಮಗು ಹೇಗೆ ಹುಟ್ಟುತ್ತದೆ ಎಂಬುದನ್ನು ಕುರಿತ ತಾಯಿಯೊಬ್ಬಳ ತಿಳಿವಳಿಕೆ ಮಗು ರೂಪುಗೊಳ್ಳಲು ಅಂತಿಮವಾಗಿ ಹೇಗೆ ನೆರವಾಗುವುದಿಲ್ಲವೋ, ಹಾಗೆಯೇ ಕಥಾ ಬರವಣಿಗೆಯ ಬಗೆಗಿನ ತಿಳಿವಳಿಕೆ